**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂ: 21/2022**

ಸಿ.ಡಬ್ಲ್ಯೂ –2 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | : | ವಿಜಯಕುಮಾರ |
| ತಂದೆ:ಗಂಡ | : | ಅಪ್ಪಾರಾಯ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬೆಟ್ಟ ಜೇವರ್ಗಿ |

ದಿನಾಂಕ:18.10.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ಆರೋಪಿ ಪರಿಚಯ ಇರುತ್ತದೆ. ಚಾಸಾ-1, 3 ರಿಂದ 8 ರವರ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ಪಂಚನಾಮೆ ತೋರಿಸಿ ಸಹಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶ**:** ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು**)**

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ದಿ 06.07.2021 ರಂದು ಬೆಳಗ್ಗೆ 9.00 ರಿಂದ 10.00 ರ ವರೆಗೆ ನನ್ನ ಸಮಕ್ಷಮ ಪಂಚನಾಮ ಮಾಡಿರುತ್ತಾರೆ ಎಂದರೆ ಸರಿ ಅಲ್ಲ.ನಾನು ಹಾಗೂ ಚಾಸಾ-3 ಪಂಚನಾಮೆಯನ್ನು ಓದಿ ತಿಳಿದು ಸಹಿ ಮಾಡಿರುತ್ತೆವೆ ಎಂದರೆ ಸಾಕ್ಷಿ ನಾನೊಬ್ಬನೇ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಗುನ್ನೆ ಸ್ಥಳ ವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ಒಂದು ಕುಡಗೋಲು ಜಪ್ತಿಪಡಿಸಿರುತ್ತಾರೆ ಎಂದರೆ ಸರಿ ಅಲ್ಲ. ಪಂಚನಾಮೆಯನ್ನು ಓದಿ ತಿಳಿದು ಸಹಿ ಮಾಡಿದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ

**ಮರುವಿಚಾರಣೆ:-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.  ಆಳಂದ.